ಕರ್ನಾಟಕ ಸರ್ಕಾರ
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-560 001.
ದೂ. 080-22372738 E-mail: nregs-ka@nic.in

ಸಂ: ಗ್ರಾಅಪ 242 ಉಖಾಯೋ 2011 **ದಿನಾಂಕ: 21-08-2012**

ಗೆ,
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿ
ಧಾರವಾಡ

ಮಾನ್ಯರೇ

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯ ಉದ್ಯೋಗ ಚೀಟಿಗಳಲ್ಲಿ (Jobcard) ಆಧಾರ್ ನಂಬರ್‌ಗಳನ್ನು ಅಳವಡಿಸುವ ಕುರಿತು.

ಉಲ್ಲೇಖ:
1. ಮಾನ್ಯ ಸರ್ಕಾರದ ಮುಖ್ಯಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ, ಭಾರತ ಸರ್ಕಾರದ ಆರ್ಥಿಕ ಇಲಾಖೆಯ ಮಂತ್ರಾಲಯದ ಕಾರ್ಯದರ್ಶಿಗಳು (ವೆಚ್ಚಗಳು) ಇವರ ಉಪಸ್ಥಿತಿಯಲ್ಲಿ ದಿ: 01.06.2012 ರಂದು ನಡೆದ ಸಭೆ
2. ಅ.ಸ. ಪತ್ರ ಸಂಖ್ಯೆ: ಗ್ರಾಅಪ 242 ಉಖಾಯೋ 2011 ದಿ: 07.06.2012
3. ನಿರ್ದೇಶನಾಲಯದ ಪತ್ರ ಸಂಖ್ಯೆ: ಗ್ರಾಅಪ 242 ಉಖಾಯೋ 2011 ದಿನಾಂಕ: 25.07.2012
4. ನಿಯಂತ್ರಕರು (ಲೆ.ನಿ ಮತ್ತು ಯೋಮೇಘ) ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ ಆರ್ಥಿಕ ಇಲಾಖೆ ಇವರ ಪತ್ರ ದಿನಾಂಕ: 01.08.2012

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯ ಉದ್ಯೋಗ ಚೀಟಿಗಳಲ್ಲಿ (Jobcard) ಆಧಾರ್ ನಂಬರ್‌ಗಳನ್ನು ಅಳವಡಿಸುವ ಕುರಿತು, ಕೆಳಗೆ ತೋರಿಸಿದ ನಮೂನೆಯಲ್ಲಿ ಮಾಹಿತಿಯನ್ನು ಗ್ರಾಮ ಪಂಚಾಯಿತಿವಾರು ಒಟ್ಟು ಎಷ್ಟು ಉದ್ಯೋಗ ಚೀಟಿಗಳಲ್ಲಿ ಆಧಾರ್ ಸಂಖ್ಯೆಗಳನ್ನು ಅಳವಡಿಸಲಾಗಿದೆ, ಸಲ್ಲಿಸುವಂತೆ ಕೋರಿದೆ.

ಜಿಲ್ಲೆಯ ಹೆಸರು :
ತಾಲ್ಲೂಕಿನ ಹೆಸರು :

| ಕ್ರ. ಸಂ | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಉದ್ಯೋಗ ಚೀಟಿಗಳು | ಆಧಾರ್ ಸಂಖ್ಯೆ ಅಳವಡಿಸಿದ ಒಟ್ಟು ಉದ್ಯೋಗ ಚೀಟಿಗಳು | ಬಾಕಿ | ಆಧಾರ್ ಸಂಖ್ಯೆ ಅಳವಡಿಸಲು ವಿಳಂಬವಾದಲ್ಲಿ ಕಾರಣಗಳು ಮತ್ತು ಷರಾ |
|---|---|---|---|---|---|
| 1 | 2 | 3 | 4 | 5 | 6 |
| | | | | | |

ಮುಂದುವರೆಯುತ್ತಾ, ಉಲ್ಲೇಖ (4) ರ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸುತ್ತಾ ತಮ್ಮ ಜಿಲ್ಲೆ ಶೇಕಡಾ 95 ರಷ್ಟು ಆಧಾರ್ ಕಾರ್ಡ್ ನೊಂದಾವಣಿಯಾಗಿರುವುದ್ದರಿಂದ ಈ ಜಿಲ್ಲೆಗಳನ್ನು ಮಾರ್ಗದರ್ಶಿ (Pilot) ಜಿಲ್ಲೆಗಳನ್ನಾಗಿ ಪರಿಗಣಿಸಲು ನಿಯಂತ್ರಕರು ಸೂಚಿಸಿದ್ದಾರೆ. ಬ್ಯಾಂಕ್‌ಗಳ, ಫಲಾನುಭವಿಗಳ No frill ಖಾತೆ ತೆರೆಯಲು ಅನುವಾಗುವಂತೆ

ಫಲಾನುಭವಿಗಳ ಪಟ್ಟಿ ಮತ್ತು ಫಲಾನುಭವಿಗಳ ಆಧಾರ್ ಕಾರ್ಡ್ ಸಂಖ್ಯೆಯೊಂದಿಗೆ, ಫಲಾನುಭವಿಗಳ ವಿದ್ಯುನ್ಮಾನ್ ಮಾಹಿತಿ ಸಾಫ್ಟ್ ಕಾಪಿಯನ್ನು ಸಂಬಂಧಿಸಿದ ತಮ್ಮ ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರಿಗೆ ತಿಳಿಸಲು ಈ ಮೂಲಕ ಸೂಚಿಸಿದೆ. ಈ ಕುರಿತು ಕೈಗೊಂಡ ಕ್ರಮದ ಮಾಹಿತಿಯನ್ನು ನಿಯಂತ್ರಕರಿಗೆ ನೇರವಾಗಿ ಸಲ್ಲಿಸಲು ಹಾಗೂ ಪ್ರತಿಯನ್ನು ಈ ಕಛೇರಿಗೆ ನೀಡಲು ಸೂಚಿಸಿದೆ.

ಅಡಕಗಳು : ಮೇಲಿನಂತೆ

ತಮ್ಮ ವಿಶ್ವಾಸಿ,

(ಮುನೀಶ್ ಮೌದ್ಗಿಲ್)
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು

1. ನಿಯಂತ್ರಿಕರು (ಲೆ.ನಿ. ಮತ್ತು ಯೋಮೇಥ) ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಇವರಿಗೆ ಮಾಹಿತಿಗಾಗಿ, # 401, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರಗಳು) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇವರಿಗೆ ಮಾಹಿತಿಗಾಗಿ
3. ನೋಡಲ್ ಅಧಿಕಾರಿಗಳು, ಧಾರವಾಡ, ನಿರ್ದೇಶನಾಲಯ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇವರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ

ಕೆ. ಎಲ್. ಲೋಕನಾಥ
ನಿಯಂತ್ರಕರು (ಲೆ.ನಿ. ಮತ್ತು ಯೋಮೇಘ) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ
CONTROLLER
(A.M. & P.M.U.)
& E/o JOINT SECRETARY TO GOVERNMENT
FINANCE DEPARTMENT

Telephone No.: 080-22032717
Fax: 080-22373427
E-mail: camfd@kar.nic.in

ಕರ್ನಾಟಕ ಸರ್ಕಾರದ ಸಚಿವಾಲಯ
# 401, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
KARNATAKA GOVERNMENT SECRETARIAT
# 401, 4TH FLOOR, M.S. BUILDING, BANGALORE

ದಿನಾಂಕ / DATED 01.08.2012

ಸಂಖ್ಯೆ: ಆಇ 9 ಸಿಎಎಂ 2012

ಪ್ರಿಯ ಶ್ರೀ ಹೇಮಾಜಿ ನಾಯಕ್ ರವರೇ,

ವಿಷಯ: ಆಧಾರ್ ಕಾರ್ಡ್ ಆಧಾರಿತ ಸೇವಾ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸುವ ಯೋಜನೆಯನ್ನು ಕಾರ್ಯಗತ ಮಾಡುವ ಕುರಿತು.

* * *

ಕರ್ನಾಟಕ ರಾಜ್ಯ ಸರ್ಕಾರವು ಆಧಾರ್ ಕಾರ್ಡ್ ಆಧಾರಿತ ಸೇವಾ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸುವ ಯೋಜನೆಯನ್ನು ಹಮ್ಮಿಕೊಂಡಿರುತ್ತದೆ. ಪ್ರಸ್ತುತ, ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ, ವಸತಿ ಯೋಜನೆ, ವಿದ್ಯಾರ್ಥಿ ವೇತನಗಳು ನೀಡಲಾಗುತ್ತಿರುವ ಸಹಾಯಧನ ಯೋಜನೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ ಮತ್ತು ತುಮಕೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಶೇ. 95%ರಷ್ಟು ಆಧಾರ್ ಕಾರ್ಡ್ ಗಳ ನೋಂದಣಿಯಾಗಿರುವುದರಿಂದ ಈ ಜಿಲ್ಲೆಗಳನ್ನು ಮಾರ್ಗದರ್ಶಿ (pilot) ಜಿಲ್ಲೆಗಳಾಗಿ ಪರಿಗಣಿಸಲಾಗಿರುವ ವಿಷಯವು ತಮಗೆ ತಿಳಿದ ವಿಷಯವಾಗಿರುತ್ತದೆ.

ಯೋಜನಾ ಕಾರ್ಯಗತದ ಪ್ರಾರಂಭಿಕ ಹಂತವಾಗಿ, ಬ್ಯಾಂಕುಗಳು ಫಲಾನುಭವಿಗಳ No frill ಖಾತೆ ತೆರೆಯಲು ಅನುವಾಗುವಂತೆ ಫಲಾನುಭವಿಗಳ ಪಟ್ಟಿ ಮತ್ತು ಫಲಾನುಭವಿಗಳ ಆಧಾರ್ ಕಾರ್ಡ್ ಸಂಖ್ಯೆಯೊಂದಿಗೆ ಫಲಾನುಭವಿಗಳ ವಿದ್ಯುನ್ಮಾನ ಮಾಹಿತಿ ಸಾಫ್ಟ್ ಕಾಪಿ (Electronic database soft copy)ಯನ್ನು ಸಂಬಂಧಿಸಿದ ಜಿಲ್ಲೆಗಳ ಲೀಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕರುಗಳಿಗೆ ಕಳುಹಿಸಬೇಕಾಗಿರುತ್ತದೆ.

ಈ ದಿಸೆಯಲ್ಲಿ ಸಕಾಲಿಕ ಹಾಗೂ ಪರಿಣಾಮಕಾರಿ ಕ್ರಮ ಕೈಗೊಳ್ಳಲು ಮತ್ತು ಮಾಹಿತಿ ನೀಡಲು ಕೋರಿದೆ.

ತಮ್ಮ ನಂಬುಗೆಯ,

Director
MG NREGA RD & PR DEPT

ಗೆ,

ಶ್ರೀ ಹೇಮಾಜಿ ನಾಯಕ್,
ನಿರ್ದೇಶಕರು,
ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.